ರಾಜ್ಯದಲ್ಲಿ ವಸತಿ ನಿಲಯಗಳಿಗೆ ಕಟ್ಟಡ

259 (575): ಶ್ರೀ ಪಾಟೀಲ್ ಸಿದ್ದನಲಿಂಗನಗೌಡ ಸಿದ್ದನಗೌಡ (ಮುಂಡರಗಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಟ್ಟಡವಿರುವ ವಸತಿ ನಿಲಯಗಳ ತಾಲ್ಲೂಕುವಾರು ವಿವರ ನೀಡುವುದು;

ಆ) ಮುಂಡರಗಿ ಮತದಾರ ಕ್ಷೇತ್ರದಲ್ಲಿರುವ ಸರ್ಕಾರಿ ವಸತಿ ನಿಲಯಗಳೆಷ್ಟು; ಎಷ್ಟು ವಸತಿ ನಿಲಯಗಳಿಗೆ ಕಟ್ಟಡಗಳಿವೆ;

ಇ) ಕಟ್ಟಡವಿಲ್ಲದ ವಸತಿ ನಿಲಯಗಳಿಗೆ ಕಟ್ಟಡ ಕಟ್ಟಿಸಲು ಕಾಲಮಿತಿ ಹಾಕಿಕೊಳ್ಳಲಾಗಿದೆಯೆ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ)

		ಕಟ್ಟಡವಿರುವ ವಸತಿ ನಿಲಯಗಳ ಸಂಖ್ಯೆ
1. ಸಮಾಜ ಕಲ್ಯಾಣ ಇಲಾಖೆ :	–	1088
2. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ	–	47
3. ಹಿಂದುಳಿದ ವರ್ಗಗಳ ಇಲಾಖೆ	–	761
4. ಅಲ್ಪಸಂಖ್ಯಾತರ ಇಲಾಖೆ	–	01

(ತಾಲ್ಲಕುವಾರು ಮಾಹಿತಿಯನ್ನು ಈ ಹಂತದಲ್ಲಿ ಒದಗಿಸಲು ಸಾಧ್ಯವಾಗುತ್ತಿಲ್ಲ)

ಆ)

	ವಿದ್ಯಾರ್ಥಿ ನಿಲಯಗಳ ಸಂಖ್ಯೆ	ಕಟ್ಟಡವಿರುವ ವಿದ್ಯಾರ್ಥಿನಿಲಯಗಳ ಸಂಖ್ಯೆ
1. ಸಮಾಜ ಕಲ್ಯಾಣ ಇಲಾಖೆ	13	06
2. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ	--	--
3. ಹಿಂದುಳಿದ ವರ್ಗಗಳ ಇಲಾಖೆ	11	05
4. ಅಲ್ಪಸಂಖ್ಯಾತರ ಇಲಾಖೆ	--	--

ಇ) ಇಲ್ಲ.

(ಕಟ್ಟಡವಿಲ್ಲದ ವಸತಿ ನಿಲಯಗಳಿಗೆ ಸ್ವಂತ ಕಟ್ಟಡ ಕಟ್ಟಲು ಅನುದಾನ ಲಭ್ಯತೆಯನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ)

ಬೆಳ್ತಂಗಡಿ ತಾಲ್ಲೂಕನ್ನು ಬೂದು ಪ್ರದೇಶವೆಂದು ಘೋಷಿಸಿರುವುದನ್ನು ಬದಲಾವಣೆ ಮಾಡುವುದು

260 (239): ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕನ್ನು ಎಂದಿನಿಂದ ಬೂದು ಪ್ರದೇಶವೆಂದು ಘೋಷಿಸಲ್ಪಟ್ಟಿತ್ತು.

ಅ) ಈಗ ಬೂದು ಪ್ರದೇಶ ಬಿಳಿ ಪ್ರದೇಶವೆಂದು ಘೋಷಣೆ ಆಗಿದೆಯೇ; ಯಾವ ಕಾರಣಕ್ಕಾಗಿ ಹಾಗೂ ಯಾವ ವರ್ಷದಿಂದ ಇದು ಅನ್ವಯವಾಗಿದೆ?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) ದಿನಾಂಕ: 12.02.1996ರಿಂದ ಬೂದು ಪ್ರದೇಶವೆಂದು ಘೋಷಿಸಿದೆ.

ಆ) ಇನ್ನೂ ಘೋಷಣೆಯಾಗಿರುವುದಿಲ್ಲ.

ರಾಜ್ಯದಲ್ಲಿ ಮೀನುಗಾರರಿಗೆ ನಿರ್ಮಿಸಿದ ಮನೆಗಳ ವಿವರ

261 (228): ಶ್ರೀ ರಾಜಾ ವೆಂಕಟಪ್ಪ ನಾಯಕ್ (ಶೋರಾಪುರ) ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ 2002–2003–2204ನೇ ಸಾಲುಗಳಲ್ಲಿ ಮೀನುಗಾರರಿಗೆ ನಿರ್ಮಾಣಗೊಂಡ ಮನೆಗಳ ವಿವರಗಳನ್ನು ಒದಗಿಸುವುದು;

ಆ) ಶೋರಾಪುರ್ ತಾಲ್ಲೂಕಿನಲ್ಲಿ 2002–2003–2004ನೇ ಸಾಲಿನಲ್ಲಿ ನಿರ್ಮಾಣಗೊಂಡ ಮೀನುಗಾರರ ಮನೆಗಳ ಸಂಖ್ಯೆ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು) :

ಅ) ಮೀನುಗಾರರಿಗೆ 2002–2003–2004ನೇ ಸಾಲುಗಳಿಗೆ ಒಟ್ಟು 3,000 ಮನೆಗಳು ಸರ್ಕಾರದಿಂದ ಮಂಜೂರಾಗಿರುತ್ತದೆ. ಸದರಿ ಮನೆಗಳನ್ನು ನಿರ್ಮಿಸಲು ಹುಡ್ಕೋದಿಂದ ಸೆಪ್ಟೆಂಬರ್ 2003ರಲ್ಲಿ ರೂ. 500.00 ಲಕ್ಷಗಳ ಸಾಲ ಬಿಡುಗಡೆಯಾಗಿದ್ದು ಅದನ್ನು ಸಂಬಂಧಿಸಿದ ನಿರ್ಮಾಣ ಸಂಸ್ಥೆಗಳಿಗೆ ಈಗಾಗಲೇ ಬಿಡುಗಡೆಗೊಳಿಸಲಾಗಿದೆ. ಮನೆ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.

ಆ) 2002–2003–2004ನೇ ಸಾಲಿನಲ್ಲಿ ಶೋರಾಪುರ್ ತಾಲ್ಲೂಕಿಗೆ ಮನೆಗಳು ಮಂಜೂರಾಗಿರುವುದಿಲ್ಲ.

ಕೆ.ಐ.ಎ.ಡಿ.ಬಿ. ಅಧಿಕಾರಿಗಳ ಅವ್ಯವಹಾರ

262 (242): ಶ್ರೀ ರವಿಂದ್ರನಾಥ್ ಎಸ್.ಎ. (ಮಾಯಕೊಂಡ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಭಿವೃದ್ಧಿಯ ಹೆಸರಿನಲ್ಲಿ ನಗರದ ಸುತ್ತಲೂ ಇರುವ ರೈತರ ಜಮೀನು ವಶಕ್ಕೆ ಪಡೆಯಲು ಬಿ.ಡಿ.ಎ. ಹಾಗೂ ಕೆ.ಐ.ಎ.ಡಿ.ಬಿ.ಯು ಅಧಿಸೂಚನೆ ಹೊರಡಿಸಿದೆಯೇ;

ಆ) ಯಾವ ಯಾವ ಉದ್ದೇಶಕ್ಕೆ ಎಷ್ಟು ಎಕರೆ ಜಾಗವನ್ನು ವಶಪಡಿಸಿಕೊಳ್ಳಲು ಉದ್ದೇಶಿಸಲಾಗಿದೆ;

ಇ) ಇದಕ್ಕೆ ನೀಡುತ್ತಿರುವ ಬೆಲೆ ಎಷ್ಟು; ಈ ಸಂದರ್ಭದಲ್ಲಿ ಖಾಸಗೀ ಭೂ ವ್ಯವಹಾರ ಸಂಸ್ಥೆಗಳೊಂದಿಗೆ ಮೇಲಿನ ಇಲಾಖೆಗಳ ಅಧಿಕಾರಿಗಳು ಷಾಮೀಲಾಗಿರುವುದು ಕಂಡು ಬಂದಿದೆಯೇ;

ಈ) ಸ್ವಾಧೀನಪಡಿಸಿಕೊಂಡ ಜಮೀನು ವ್ಯಾಪ್ತಿಯಲ್ಲಿ ಕೆರೆಗಳನ್ನು ಕಬಳಿಕೆ ಮಾಡಿರುವುದು ನಿಜವೇ, ಇದು ನಿಯಮ ಉಲ್ಲಂಘನೆಯಲ್ಲವೇ;

ಉ) ಈ ಅವ್ಯವಹಾರದ ಬಗ್ಗೆ ತನಿಖೆಯನ್ನು ಸರ್ಕಾರವು ಕೈಗೊಂಡಿದೆಯೇ; ತನಿಖೆ ಯಾವ ಹಂತದಲ್ಲಿದೆ; ವಿವರ ಒದಗಿಸುವುದು; ತಪ್ಪಿತಸ್ಥರ ವಿರುದ್ಧ ಯಾವ ಕ್ರಮ ಜರುಗಿಸಲಾಗಿದೆ; ತಿಳಿಸುವುದು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಇಂತಹ ಪ್ರಕರಣ ಇರುವುದಿಲ್ಲ.